**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 95/2020**

**ಚಾ.ಸಾಃ 05, ಪ್ರಾ.ಸಾಃ 01**

| | |
|---|---|
| ಸಾಕ್ಷಿದಾರನ ಹೆಸರು | ಮಂಜುನಾಥ ನಾಯ್ಕ |
| ತಂದೆಯ ಹೆಸರು | ಗಣಪತಿ ನಾಯ್ಕ |
| ವಯಸ್ಸು | 30 ವರ್ಷಗಳು |
| ಉದ್ಯೋಗ | ಚಾಲಕ |
| ವಾಸ್ತವ್ಯ | ಹೊನ್ನಾವರ |

**ಸಾಕ್ಷಿಯನ್ನು ದಿನಾಂಕಃ 02-02-2023 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ಸಾಕ್ಷಿಗೆ ಈ ಪ್ರಕರಣದಲ್ಲಿ ಹಾಜರು ಮಾಡಿರುವ ಹಾಗೂ ಆರೋಪಿಗಳು ಕಳ್ಳತನ ಮಾಡಿರುವ ಜಾಗವನ್ನು ತೋರಿಸಿದಾಗ ದಿನಾಂಕ 04-08-2020 ರಂದು ಜರುಗಿಸಲಾಗಿದೆ ಎಂದು ಹೇಳುವ ಪಂಚನಾಮೆಯನ್ನು ತೋರಿಸಲಾಗಿ ಅದರ ಮೇಲಿನ ಒಂದು ಸಹಿಯನ್ನು ಸಾಕ್ಷಿ ತನ್ನದು ಎಂದು ತಿಳಿಸಿದ್ದರಿಂದ ಸದರಿ ಪಂಚನಾಮೆಯನ್ನು ನಿಪಿ-1 ಮತ್ತು ಅದರ ಮೇಲಿನ ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಸದರಿ ಸಹಿಯನ್ನು ದಿನಾಂಕ 04-08-2020 ರಂದು ಕಡತೋಕಾದಲ್ಲಿ ಮಾಡಿರುತ್ತೇನೆ. ಪೋಲಿಸರು ನನ್ನನ್ನು ಹೊನ್ನಾವರದಿಂದ ಕಡತೋಕಾಕ್ಕೆ ಕರೆದುಕೊಂಡು ಹೋಗಿದ್ದರು. ಆ ಸಂದರ್ಭದಲ್ಲಿ ನನ್ನ ಜೊತೆ ಚಾಸಾ-4 ವಿಷ್ಣು ಗೌಡ, ಪೋಲಿಸರು ಮತ್ತು ಇಬ್ಬರು ಆಪಾದಿತರು ಇದ್ದರು. ಆಪಾದಿತರ ಹೆಸರುಗಳು ಗೊತ್ತಿಲ್ಲ. ಆಪಾದಿತರು ಒಂದು ಮನೆಯನ್ನು ತೋರಿಸಿರುತ್ತಾರೆ. ಪೋಲಿಸರು ನಮ್ಮನ್ನು ನಿಲ್ಲಿಸಿ ಛಾಯಾಚಿತ್ರ ತೆಗೆದಿರುತ್ತಾರೆ.

**(ಈ ಸಂದರ್ಭದಲ್ಲಿ ಸ.ಸ.ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲಿಗೆ ಒಳಪಡಿಸಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು.)**

**ಪಾಟೀಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ,**

ದಿನಾಂಕ 04-08-2020 ರಂದು ಹೊನ್ನಾವರ ಪೋಲೀಸ್ ಠಾಣೆಯ ಆರಕ್ಷಕ ಉಪ-ನಿರೀಕ್ಷಕರಾದ ಚಾಸಾ-14 ಸಾವಿತ್ರಿ ನಾಯ್ಕರವರು ನಾನು ಮತ್ತು ಚಾಸಾ-4 ನ್ನು ಠಾಣೆಗೆ ಬರಮಾಡಿಕೊಂಡಿದ್ದರು ಎಂದರೆ ಸರಿ. ನಾನು ಠಾಣೆಗೆ ಹೋದಾಗ ಅಲ್ಲಿ ಈಗ ನ್ಯಾಯಾಲಯದ ಮುಂದೆ

ಇರುವ 1ನೇ ಆರೋಪಿಯಾದ ಸಜ್ಜದ್ ಅಹ್ಮದ್ ಗಣಿ ಮತ್ತು ಗೈರುಹಾಜರಿರುವ ಮುಬಾಸಿರ್ ಕುತುಬುದ್ದೀನ್ ಗಣಿ ಹಾಜರಿದ್ದರು ಎಂದರೆ ಸರಿ. ಆರೋಪಿಗಳು ಹೊನ್ನಾವರದ ಅಸೂರಖಾನಾಗಲ್ಲಿಯಲ್ಲಿ ಮಸೀದಿ ಹತ್ತಿರ ಒಂದು ಮನೆಯಲ್ಲಿ ತಾವು ಕಳ್ಳತನ ಮಾಡಿದ್ದು ಸದರಿ ಜಾಗವನ್ನು ತೋರಿಸುವುದಾಗಿ ಹೇಳಿದರು ಎಂದರೆ ಸರಿ. ನಂತರ ಆರೋಪಿಗಳು ನಮ್ಮನ್ನು ಹೊನ್ನಾವರದ ಅಸೂರಖಾನಾಗಲ್ಲಿಯಲ್ಲಿ ಮಸೀದಿ ಹತ್ತಿರ ಇರುವ ಚಾಸಾ-1ರವರ ಮನೆಗೆ ಕರೆದುಕೊಂಡು ಹೋಗಿ ತಾವು ಯಾವ ರೀತಿ ಕಳ್ಳತನ ಮಾಡಿರುತ್ತೇವೆ ಎನ್ನುವುದನ್ನು ತೋರಿಸಿದರು ಎಂದರೆ ಸರಿ. ಆ ಸಂದರ್ಭದಲ್ಲಿ ಪೋಲಿಸರು ನಿಪಿ-1ರ ಪ್ರಕಾರ ಪಂಚನಾಮೆಯನ್ನು ಜರುಗಿಸಿದರು ಎಂದರೆ ಸರಿ.

**ಪಾಟೀಸವಾಲುಃ- ಆರೋಪಿಗಳ ಪರವಾಗಿ ಶ್ರೀ ವಿಠ್ಠಲ ಎಂ. ಭಂಡಾರಿಯವರಿಂದಃ**

ನಾನು ಹೊನ್ನಾವರದ ಆಟೋ ರಿಕ್ಷಾ ನಿಲ್ದಾಣದಲ್ಲಿದ್ದಾಗ ಚಾಸಾ-14 ನನ್ನನ್ನು ಠಾಣೆಗೆ ಅವರ ಜೀಪಿನಲ್ಲಿ ಕರೆದುಕೊಂಡು ಹೋಗಿರುತ್ತಾರೆ. ಜಾಗವನ್ನು ಆರೋಪಿಗಳು ತೋರಿಸಿರುತ್ತಾರೆ. ಸದರಿ ಜಾಗವು ಮನೆಯ ಯಾವ ದಿಕ್ಕಿನಲ್ಲಿತ್ತು ಎನ್ನುವುದನ್ನು ಹೇಳಲಾಗುವುದಿಲ್ಲ. ಪೋಲಿಸರು ನಮ್ಮ ಸಮಕ್ಷಮ ಆರೋಪಿಗಳನ್ನು ವಿಚಾರಣೆ ಮಾಡಿರುವುದಿಲ್ಲ. ಪೋಲಿಸರ ಜೊತೆ ಇದ್ದರು ಎಂದು ಹೇಳಲಾದ ಇಬ್ಬರು ಆರೋಪಿಗಳು ಪೋಲಿಸರ ಮುಂದೆ ಯಾವುದೇ ಸ್ವ ಇಚ್ಛಾ ಹೇಳಿಕೆಗಳನ್ನು ನೀಡಿರುವುದಿಲ್ಲ. ನಿಪಿ-1ರಲ್ಲಿ ಏನು ಬರೆದಿದೆ ಎನ್ನುವುದು ನನಗೆ ಗೊತ್ತಿಲ್ಲ. ನಿಪಿ-1ನ್ನು ಬರೆಯಲು ನಾನು ಮಾಹಿತಿ ನೀಡಿರುವುದಿಲ್ಲ. ನಿಪಿ-1ಕ್ಕೆ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**